**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 75/2018
ಪಿಡಬ್ಲು :3 ಸಿಡಬ್ಲು : 22

| | |
|---|---|
| ಸಾಕ್ಷಿಯ ಹೆಸರು | : ಶ್ರೀಮತಿ ಅಬ್ಬಾಯವ್ವ ಯಲ್ಲಪ್ಪ ಪೂಜೇರಿ |
| ತಂದೆಯ ಹೆಸರು | : ಶ್ರೀ ಯಲ್ಲಪ್ಪ ಪೂಜೇರಿ |
| ವಯಸ್ಸು | : 45 ವರ್ಷ |
| ಉದ್ಯೋಗ | : ಕೂಲಿ ಕೆಲಸ |
| ವಾಸ್ತವ್ಯ | : ಮುಗಳಖೋಡ |
| ದಿನಾಂಕ | : 21.01.2023 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**<u>ಮುಖ್ಯ ವಿಚಾರಣೆ</u> : <u>ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

ಫ್ರಾಸಾಃ 1 ಬಸಪ್ಪ ಮಾದರ, ಫ್ರಾಸಾಃ 2 ಕಸ್ತೂರಿ, ಚಾಸಾಃ 9 ವಿಮಲವ್ವ ಮಾದರ, ಚಾಸಾಃ 10 ಜಯಪಾಲ ಮಾದರ, ಚಾಸಾಃ 13 ವಿಠ್ಠಲ ಮಾದರ, ಚಾಸಾಃ 16 ಭೀಮಪ್ಪ ಮಾದರ, ಚಾಸಾಃ 17 ಧನಪಾಲ ಮಾದರ, ಚಾಸಾಃ 8 ಲಕ್ಷ್ಮಣ ಕೆಳಗಡೆ, ಚಾಸಾಃ 11 ಶಿವಾನಂದ ಭಾವಿಮನಿ, ಚಾಸಾಃ 12 ಅನಿಲ ಇರಗಾರ, ಚಾಸಾಃ 14 ರಾಜು ಸಂದ್ರಿಮನಿ, ಚಾಸಾಃ 15 ಮಹಾದೇವ ಗಸ್ತಿ, ಚಾಸಾಃ 18 ಸುಶಿಲವ್ವಾ ಸಂದ್ರಿಮನಿ, ಚಾಸಾಃ 19 ಸಂದ್ರೆವ್ವಾ ಚಾಸಾಃ 21 ಶಾಂತವ್ವಾ ಚಾಸಾಃ 23 ಸುಮಿತ್ರಾ ಪೂಜೇರಿ, ಚಾಸಾಃ 24 ಮಾಲವ್ವಾ ಹಾದಿಮನಿ, ಚಾಸಾಃ 25 ಸುಶಿಲವ್ವಾ ಮಾದರ, ಚಾಸಾಃ 26 ನೀಲವ್ವಾ ಬೆಳಗಲಿ, ಚಾಸಾಃ 27 ರುಕ್ಮವ್ವಾ ಭಾವಿಮನಿ, ಚಾಸಾಃ 28 ಯಲ್ಲವ್ವಾ ಹಾದಿಮನಿ, ಚಾಸಾಃ 29 ಹನುಮಂತ ಕೆಳಗಡೆ, ಚಾಸಾಃ 30 ಯಮನಪ್ಪ ಐಹೊಳೆ ನನಗೆ ಗೊತ್ತು. 1 ನೇ ಆರೋಪಿ ರಾವಸಾಬ, 2 ನೇ ಆರೋಪಿ ಹನುಮಂತ, 3 ನೇ ಆರೋಪಿ ನೇಮಿನಾತ, 4 ನೇ ಆರೋಪಿ ಪ್ರವೀಣ, 5 ನೇ ಆರೋಪಿ ಅಜೀತ, 6 ನೇ ಆರೋಪಿ ಸುರೇಂದ್ರ, 7 ನೇ ಆರೋಪಿ ಶ್ರೀಕಾಂತ, 8 ನೇ ಆರೋಪಿ ಪುನಾಜಿ, 9 ನೇ ಆರೋಪಿ ಪದ್ಮಣ್ಣ, 10 ನೇ ಆರೋಪಿ ಮೃತ ಅಪ್ಪಾಸಾಬ, 11 ನೇ ಆರೋಪಿ ಬುಜಪ್ಪ, 12 ನೇ ಆರೋಪಿ ಬಾಹುಬಲಿ, 13 ನೇ ಆರೋಪಿ ರಾಜಕುಮಾರ, 14 ನೇ ಆರೋಪಿ ನೇಮಿನಾತ, 16 ನೇ ಆರೋಪಿ ಸಿದ್ದಪ್ಪ, 17 ನೇ ಆರೋಪಿ ರವಿ, 18 ನೇ ಆರೋಪಿ ಭುಜಬಲಿ, 19 ನೇ ಆರೋಪಿ ಪರಪ್ಪ, 20 ನೇ ಆರೋಪಿ ಭೀಮಪ್ಪ, 21 ನೇ ಆರೋಪಿ ಮೃತ ಮಲ್ಲಪ್ಪ, 22 ನೇ ಆರೋಪಿ ಬಾಳಪ್ಪ, 23 ನೇ ಆರೋಪಿ ಭೀಮಪ್ಪ, 24 ನೇ ಆರೋಪಿ

ರಾಜೇಂದ್ರ, 25 ನೇ ಆರೋಪಿ ಬರತೇಶ, 26 ನೇ ಆರೋಪಿ ಕುಮಾರ, 27 ನೇ ಆರೋಪಿ ಮಲ್ಲಪ್ಪ, 28 ನೇ ಆರೋಪಿ ಕೆಂಚಪ್ಪ, 29 ನೇ ಆರೋಪಿ ಮೃತ ಬಿಮಪ್ಪ, 30 ನೇ ಆರೋಪಿ ಮೃತ ಲಕ್ಷ್ಮಣ, 31 ನೇ ಆರೋಪಿ ಸುರೇಶ, 32 ನೇ ಆರೋಪಿ ಸಂಜಯ, 33 ನೇ ಆರೋಪಿ ಅರಿಹಂತ, 34 ನೇ ಆರೋಪಿ ಸಾಗರ ನನಗೆ ಗೊತ್ತು.

2. ಆರೋಪಿತರಿಗೆ ಹಾಗೂ ನಮ್ಮ ಮಧ್ಯೆ ಯಾವುದೇ ಜಗಳ ಆಗಿಲ್ಲ. ಅವರು ನಮಗೆ ಜಾತಿ ನಿಂದನೆ ಮಾಡುವುದಾಗಲೀ ಹಲ್ಲೆ ಮಾಡುವುದಾಗಲೀ ಮಾಡಿಲ್ಲ. ನಾನು ಯಾವುದೇ ಆಸ್ಪತ್ರೆಗೆ ತೋರಿಸಿ ಚಿಕಿತ್ಸೆ ಪಡೆದಿಲ್ಲ. ನಾನು ಘಟನೆಯ ಬಗ್ಗೆ ಪೋಲೀಸರ ಮುಂದೆಯಾಗಲೀ, ಯಾವುದೇ ನ್ಯಾಯಾಧೀಶರ ಮುಂದೆಯಾಗಲೀ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**ಪಾಟೀ ಸವಾಲು: ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಸರ್ಕಾರಿ ಗೌಟಾನ ಜಾಗೆಯನ್ನು ನಮ್ಮ ಸಮಾಜದವರು ಉಪಯೋಗಿಸುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಜಾಗೆಯ ಸಂಬಂಧವಾಗಿ ನಮಗೆ ಮತ್ತು ಆರೋಪಿತರಿಗೆ ತಂಟೆ ತಕರಾರು ಇತ್ತು ಎಂದರೆ ಸರಿಯಲ್ಲ. ಆರೋಪಿತರು ಸದರಿ ಜಾಗೆಯಲ್ಲಿ ಕಟ್ಟಡವನ್ನು ಕಟ್ಟುತ್ತಾರೆ ಎಂದು ಗೊತ್ತಾಗಿ, ನಾವು ಸದರಿ ಜಾಗೆಯಲ್ಲಿ ಕಟ್ಟಡ ಕಟ್ಟಬಾರದು ಎಂದು ಪುರಸಭೆಗೆ ತಕರಾರು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿಃ 4 ಎಂದು ಗುರುತಿಸಲಾಯಿತು.

2. ದಿಃ26.08.2017 ರಂದು ಮುಂಜಾನೆ 10.00 ಗಂಟೆ ಸುಮಾರಿಗೆ ನಾವು ಮನೆಯಲ್ಲಿದ್ದಾಗ ನಮ್ಮ ಓಣಿಯಲ್ಲಿ ತಕರಾರು ಇರುವ ಜಾಗೆಯಲ್ಲಿ ಜೈನ ಸಮಾಜದ ಜನರು ಪುನಃ ಕಟ್ಟಡ ಕಟ್ಟಲು ಸಳಿಗಳನ್ನು ನಿಲ್ಲಿಸುವ ಕೆಲಸ ಪ್ರಾರಂಭಿಸಿದ್ದರು ಎಂದರೆ ಸರಿಯಲ್ಲ. ಆ ವಿಷಯ ಗೊತ್ತಾಗಿ ನಮ್ಮ ಸಮಾಜದ ಹೆಂಗಸರು ಮತ್ತು ಗಂಡಸರು ಹೋಗಿ ಮುಗಳಖೋಡ ಪುರಸಭೆಯ ಕಚೇರಿಯ ಮುಖ್ಯಾಧಿಕಾರಿಗೆ ಭೇಟಿಯಾಗಿ ಸ್ಥಳಕ್ಕೆ ಅವರನ್ನು ಕರೆದುಕೊಂಡು

ಬಂದಿದ್ದೆವು ಎಂದರೆ ಸರಿಯಲ್ಲ. ಆಗ ಆರೋಪಿತರು ನಮ್ಮನ್ನು ಜಾತಿ ಎತ್ತಿ ಬೈದು ಕಲ್ಲು, ಕಬ್ಬಿಣದ ರಾಡು ಮತ್ತು ಬಿದಿರಿನ ಬಡಿಗೆಗಳಿಂದ ನಮ್ಮ ಸಮಾಜದವರನ್ನು ಹೊಡೆಯಲು ಪ್ರಾರಂಭಿಸಿದರು ಎಂದರೆ ಸರಿಯಲ್ಲ. ಆಗ ನಾವು ಅಲ್ಲಿಂ ದ ಓಡಿ ಹೋಗಲು ಪ್ರಯತ್ನಿಸಿದಾಗ ಮನೆಗಳ ಮೇಲೆ ಕಲ್ಲುಗಳನ್ನು ಒಗೆಯಲು ಪ್ರಾರಂಭಿಸಿದರು ಎಂದರೆ ಸರಿಯಲ್ಲ. ಓಡಿ ಹೋಗುವಾಗ ನನಗೆ ಗಾಯವಾದ್ದರಿಂದ ಹಾರೂಗೇರಿ ಸರ್ಕಾರಿ ಆಸ್ಪತ್ರೆಯಲ್ಲಿ ಉಪಚಾರ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿಃ 4 ಎ ಎಂದು ಗುರುತಿಸಲಾಯಿತು.

3. ನಾನು ದಿಃ04.09.2017 ರಂದು ರಾಯಬಾಗ ನ್ಯಾಯಾಧೀಶರ ಮುಂದೆ ಒಂದು ವಾರದ ಹಿಂದೆ ಪುರಸಭೆಯ ಮುಖ್ಯಾಧಿಕಾರಿ ನಮ್ಮ ಸಮಾಜಕ್ಕೆ ಸೇರಿದ ಸರ್ಕಾರಿ ಜಾಗದಲ್ಲಿ ಭವನ ಕಟ್ಟುವ ಬಗ್ಗೆ ಬಂದಿದ್ದು, ಅಲ್ಲಿಗೆ ಬಾಬಣ್ಣ ಬಂದು ಮತ್ತು ಇತನ ಕಡೆಯವರು ಬಂದು ಗಲಾಟೆ ಮಾಡಿ ನಮಗೆ ಮತ್ತು ನಮ್ಮ ಸಮಾಜದವರಿಗೆ ಕಲ್ಲಿನಿಂದ ಹೊಡೆದಿರುತ್ತಾರೆ ಹಾಗೆ ನಾನು ಹೆದರಿಕೊಂಡು ಮನೆಗೆ ಹೊಗಿ ಬಾಗಿಲು ಹಾಕಿಕೊಂಡಾಗ ಅವರು ಎಸೆದ ಕಲ್ಲಿನಿಂದ ನನ್ನ ಎಡಗಾಲಿಗೆ ಪಟ್ಟಾಗಿ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿಃ 5 ಎಂದು ಗುರುತಿಸಲಾಯಿತು.

4. ಘಟನೆಯಾಗಿದ್ದು, ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿದ್ದರೂ ಸಹ ಅವರ ಜೊತೆ ರಾಜಿ ಆಗಿ, ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಶ್ರೀ. ಬಿ.ಜಿ.ಜಿ. ವಕೀಲರಿಂದ 1 ಮತ್ತು 2 ನೇ ಆರೋಪಿತನ ಪರವಾಗಿ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**ಪಾಟೀ ಸವಾಲು: ಶ್ರೀ. ಎಬಿಬಿ ವಕೀಲರಿಂದ 3 ರಿಂದ 9, 11 ರಿಂದ 14, 16 ರಿಂದ 20, 22 ರಿಂದ 28, 31 ರಿಂದ 34 ನೇ ಆರೋಪಿತರ ಪರವಾಗಿ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರು ಸವಾಲು ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನ ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಅಶ್ವಿನಿ ವಿಜಯ ಶಿರಿಯಣ್ಣವರ)
3 ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು, ಬೆಳಗಾವಿ.